


Boer Goat



pvp matted flooring



Feeding



Low cost Housing



Konkan Kanyal



Black Bengal



Sirohi


ಕರ್ನಾಟಕ ಪಶು ವೈದ್ಯಕೀಯ ಪಶು ಹಾಗೂ
ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ್

ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರ ದಕ್ಷಿಣ ಕನ್ನಡ
ಜಿಲ್ಲೆ ಕಂಕನಾಡಿ ಮಂಗಳೂರು-೨


# ಕರಾವಳಿಯಲ್ಲಿ ವೈಜ್ಞಾನಿಕ ಮೇಕೆ ಸಾಕಾಣೆ




ತಾಂತ್ರಿಕ ಮಾಹಿತಿ

ಡಾ.ರಶ್ಮಿ

ಗಣೇಶ್ ಪ್ರಸಾದ್ ಎಲ್

ಡಾ. ಶಿವಕುಮಾರ್ ಮಗದ



ಕೃಷಿ ವಿಜ್ಞಾನ ಕೇಂದ್ರ (ದ.ಕ)

ಕಂಕನಾಡಿ ಮಂಗಳೂರು-೫೭೫೦೦೨

## ಕೊಂಕಣದಲ್ಲಿ ವೈಜ್ಞಾನಿಕ ಮೇಕೆ ಸಾಕಾಣಿ

ಇತಿಹಾಸ ಮೂಲಗಳ ಪ್ರಕಾರ ಮಾನವ ಮೊದಲು ಸಾಕಿದ ಪ್ರಾಣಿ ಆಡು. ಜಾನುವಾರುಗಳಲ್ಲಿ ಆಡು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಹವಾಮಾನ ವೈಪರಿತ್ಯಕ್ಕೆ ಹೊಂದಿಕೊಳ್ಳುವ ಗುಣ ಇರುವುದರಿಂದ ಆಡು ಸಾಕಾಣಿಕೆಯಲ್ಲಿ ಕಡಿಮೆ ನಿರ್ವಹಣಾ ವೆಚ್ಚ ಹಾಗೂ ಹೆಚ್ಚು ಲಾಭ ಗಳಿಸಬಹುದು. ನಮ್ಮ ದೇಶದಲ್ಲಿ ಭೂಮಿ ಇಲ್ಲದವರು ಹಾಗೂ ಕೃಷಿ ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಕಸುಬನ್ನು ಅವಲಂಬಿಸಿದ್ದಾರೆ.

ರೈತ ತನ್ನ ನಿತ್ಯ ಜೀವನಕ್ಕೆ ಬೇಕಾದ ಹಾಲು / ಮಾಂಸ / ಹೊದಿಕೆಗಳಿಗಾಗಿ ಮೇಕೆಯನ್ನು ಸಾಕಿಕೊಂಡು ಬಂದಿದ್ದಾನೆ. ಮೇಕೆ ಸಾಕಾಣೆ ಉತ್ತಮ ಹಾಗೂ ನಿರಂತರ ಆದಾಯ ತರುವುದರಿಂದ ಇವುಗಳನ್ನು ನಡೆದಾಡುವ ಬ್ಯಾಂಕ / ಎ.ಟಿ.ಎಮ್ ಎಂದು ಕರೆ-ಯುತ್ತಾರೆ. ಒಂದು ಆಕಳು ತಿನ್ನುವಷ್ಟು ಆಹಾರದಲ್ಲಿ 10 ಮೇಕೆಗಳನ್ನು ಮೇಯಿಸಬಹುದು. ಹಸುಗಳಂತೆ ಮೇಕೆಯಿಂದಲೂ ಕೂಡ ದಿನಕ್ಕೆ 2-3 ಲೀಟರ್ ಹಾಲನ್ನು ಪಡೆಯಬಹುದು ಆದ್ದ-ರಿಂದ ಇವುಗಳನ್ನು ಬಡವರ ಬಂಧು/ ಬಡವರ ಕಾಮಧೇನು ಎಂದು ಕರೆಯಲಾಗುತ್ತದೆ.

ನಮ್ಮಲ್ಲಿ 26 ವಿವಿಧ ಜಾತಿಯ 140 ಮಿಲಿಯನ್ ಆಡುಗಳಿವೆ, ಬ್ಲಾಕ್ ಬೆಂಗಾಲ್ ಉಸ್ಮಾನಿಬಾದಿ, ಗೋಹಿಲ್‌ವಾಡಿ, ಜಲವಾಡಿ, ಕನ್ನಿಆಡು, ಕಚ್, ಮೆಹಸಾನ, ಗಂಜಾಂ, ಕೊಂಕಣ ಕನ್ಯಾಲ, ಮಲಬಾರಿ, ಇವುಗಳನ್ನು ಭಾರತದ ಕೊಂಕಣ ಪ್ರದೇಶದಲ್ಲಿ ಕಾಣಬಹುದು. ಮಲಬಾರಿ, ಸ್ಥಳೀಯ ತಳಿ ಹಾಗೂ ಮಿಶ್ರ ತಳಿಗಳನ್ನು ದಕ್ಷಿಣ ಕನ್ನಡದಲ್ಲಿ ಕಾಣಬಹುದು.

## ಕೊಂಕಣ ಪ್ರದೇಶದ ಕೆಲವು ಪ್ರಮುಖ ಮೇಕೆ ತಳಿಗಳ ವಿವರ.

### ಮಲಬಾರಿ

ಮಾಂಸದ ತಳಿ. ಮೂಲ ಸ್ಥಾನ : ಉತ್ತರ ಕೇರಳ, ಕಾಸರಗೊಡ, ತ್ರಿಶೂರ್, ಕಣ್ಣೂರು.
ದೇಹದ ತೂಕ ಗಂಡು - 35 ಕೆ.ಜಿ ವಯಸ್ಕ ಹೆಣ್ಣಿನ ತೂಕ - 28 ಕೆ.ಜಿ ಬಣ್ಣ - ಸಂಪೂರ್ಣ ಕಪ್ಪು/ಸಂಪೂರ್ಣ ಬಿಳಿ ಅವಳಿ ಮರಿ ಜನನ - 45%, ತ್ರಿವಳಿ ಜನನ 4.5%.

### ಬ್ಲ್ಯಾಕ್ ಬೆಂಗಾಲ್

ಭಾರತದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಇರುವ ತಳಿ. ಗಿಡ್ಡ ತಳಿ. ಮಾಂಸ ಮತ್ತು ಚರ್ಮ ಉತ್ಪನ್ನ ತಳಿ. ಮೂಲಸ್ಥಾನ: ಪಶ್ಚಿಮ ಬಂಗಾಳ, ಜಾರ್ಕಂಡ್, ಬಿಹಾರ, ಓರಿಸ್ಸಾ, ಆಸ್ಸಾಂ, ಮಿಜೊರಾಮ್, ತ್ರಿಪುರಾ. ದೇಹದ ತೂಕ ಗಂಡು- 25-30 ಕೆ.ಜಿ ವಯಸ್ಕ ಹೆಣ್ಣಿನ ತೂಕ-20-25 ಕೆ.ಜಿ ಬಣ್ಣ - ಕಪ್ಪು, ಬಿಳಿ, ಕಂದು.

### ಕೊಂಕಣ ಕನ್ಯಾಲ

ಮೂಲಸ್ಥಾನ: ಮಹರಾಷ್ಟ್ರದ ಕೊಂಕಣ ಭಾಗ. ಗೋವ. ಮಾಂಸದ ತಳಿ. ದೇಹದ ತೂಕ ಗಂಡು-38 ರಿಂದ 40 ಕೆ.ಜಿ ವಯಸ್ಕ ಹೆಣ್ಣಿನ ತೂಕ-33 ರಿಂದ 36 ಕೆ.ಜಿ ದೇಹದ ಬಣ್ಣ - ಕಪ್ಪು, ಬಿಳಿಯ ಪಟ್ಟಿ ಮುಖದ ಮೇಲೆ, ಕಪ್ಪು ಕಿವಿ ಬಿಳಿಯ ಅಂಚು ದೇಹದ ಕೆಳಭಾಗ ಹಾಗೂ ಕಾಲುಗಳು ಬಿಳಿಯ ಬಣ್ಣ.

### ವಸತಿ

ಮೇಕೆಗಳಿಗೆ ಸಾಮಾನ್ಯವಾಗಿ ವಸತಿ ಸೌಕರ್ಯಕ್ಕಾಗಿ ಹೆಚ್ಚು ಖರ್ಚಿನಿಂದ ಕಟ್ಟಿದ ಪಕ್ಕಾ ಮನೆಗಳು ಬೇಕಿಲ್ಲ. ಹಳ್ಳಿಗಳಲ್ಲಿ ಸಿಗುವ ಬಿದಿರುಗಳ ಸಹಾಯದಿಂದ ಅಥವಾ ತೆಂಗಿನ ಗರಿ/ ಹುಲ್ಲಿನ ಗುಡಿಸಲುಗಳನ್ನು ಕಡಿಮೆ ಖರ್ಚಿನಲ್ಲಿ ಕಟ್ಟಿ ಸಾಕಬಹುದು. ಮನೆಯ ಮಧ್ಯದಲ್ಲಿ 8 ರಿಂದ 10 ಅಡಿ ಎತ್ತರವಿದ್ದು ದಂಡೆಗೆ 4 ಅಡಿ ಎತ್ತರವಾಗಿ ಇಳಿಜಾರಾಗಿರಬೇಕು. ಮೇಲೆ ಬಿದ್ದ ಮಳೆ ನೀರು ಹರಿದುಹೋಗುವಂತಿರಬೇಕು. ಗೊಬ್ಬರ ಸಂಗ್ರಹಿಸಲು ಅನುಕೂಲವಾಗುವಂತೆ ನೆಲ ಭೂಮಿಯ ಮೇಲಿಂದ 2 ಅಡಿ ಎತ್ತರಕ್ಕಿರಬೇಕು. ನೆಲೆಕ್ಕೆಬಿದಿರು/ಮರದ ಪಟ್ಟಿಯನ್ನು ಅಳವಡಿಸುವಾಗ ಪಟ್ಟಿಯಿಂದ ಪಟ್ಟಿಗೆ 1.5 ಸೆ.ಮಿ ನಷ್ಟು ಜಾಗ ಬಿಡಬೇಕು. ಇದರಿಂದ ಹಿಕ್ಕೆಯು ನೇರವಾಗಿ ಭೂಮಿಗೆ ಬೀಳುತ್ತದೆ ಹಾಗೂ ಮನೆಯೂ ಸ್ವಚ್ಚವಾಗಿರುತ್ತದೆ. ಒಂದು ದೊಡ್ಡದಾದ ಪ್ಲಾಸ್ಟಿಕ್ ಹಾಳೆಯನ್ನು ಬಳಸಿ ಗೊಬ್ಬರವನ್ನು ಸುಲಭವಾಗಿ ಸಂಗ್ರಹ ಮಾಡಬಹುದು. ಇದರಿಂದ ಶ್ರಮವು ಕಡಿಮೆ ಹಾಗೂ ಬೇಕಾಗುವ ಸ್ಥಳಾವಕಾಶವು ಕಡಿಮೆ. ಗಾಳಿಯಾಡಲು ಕಬ್ಬಿಣದ ಜಾಲರಿಗಳನ್ನು ಅಳವಡಿಸಬೇಕು.

ಎರಡು ಹೋತ (ಗಂಡು ಆಡು) ಗಳನ್ನು ಒಟ್ಟಿಗೆ ಇಡುವುದರಿಂದ ಜಗಳವಾಡಬಹುದು, ಹೋತಗಳನ್ನು ಮತ್ತು ಗರ್ಭ ಧರಿಸಿದ ಮೇಕೆಗಳನ್ನು ಗುಂಪಿನಲ್ಲಿ ಇಡಬಾರದು, ಪ್ರತಿಯೊಂದಕ್ಕೂ ಪ್ರತ್ಯೇಕ ಸ್ಥಳ ಮಾಡಿ ಇರಿಸಬೇಕು. 400 ಚದರ ಅಡಿ ಜಾಗದಲ್ಲಿ 30+1 ಮೇಕೆಗಳನ್ನು ಸಾಕಬಹುದು.

### ಸ್ಥಳಾವಕಾಶ

| ಆಹಾರ ಪದಾರ್ಥಗಳು | ಪ್ರಮಾಣ(ಶೇ.) |
|---|---|
| ನುಚ್ಚು ಮಾಡಿದ ಏಕದಳ ಧಾನ್ಯಗಳು | 75 |
| ಎಣ್ಣೆಕಾಳಿನ ಹಿಂಡಿ | 20-30 |
| ತೌಡು | 30-40 |
| ಖನಿಜ ಮಿಶ್ರಣ | 01-02 |

ಹತ್ತು ಮೇಕೆಗಳನ್ನು ಹಿಂಡಿನಲ್ಲಿ ಹೊರಾವರಣದಲ್ಲಿ ಬಿಟ್ಟಾಗ 5 ಮಿ *4 ಮಿ ಜಾಗವನ್ನು ವ್ಯಾಯಮಕ್ಕಾಗಿ ತಂತಿ ಬೇಲಿಯಿಂದ ಸುರಕ್ಷಿತಗೊಳಿಸಬೇಕಾಗುತ್ತದೆ. ಇಂತಹ ಜಾಗದಲ್ಲಿ ನೆರಳು ಕೊಡುವ ಒಂದು ದೊಡ್ಡ ಮರವಿದ್ದರೆ ಬಹಳ ಉತ್ತಮ.

## ಆಹಾರ

ಹಸು, ಕುರಿಗಳಂತೆ ನೆಲದ ಮೇಲಿನ ಹುಲ್ಲನ್ನು ತಿನ್ನಲು ಹೆಚ್ಚು ಇಷ್ಟಪಡುವುದಿಲ್ಲ. ಮೇಕೆಗಳು ಎತ್ತರದಲ್ಲಿರುವ ಎಲೆ, ಒಣ ಕಾಯಿಗಳು, ಪೊದೆಗಳು, ವಿವಿಧ ಬಗೆಯ ಗಿಡಗಂಟಿಗಳನ್ನು ತಿಂದು ತಮ್ಮ ಆಹಾರದ ಅವಶ್ಯಕತೆಯನ್ನು ಪೂರೈಸಿಕೊಳ್ಳುತ್ತವೆ. ಮೇಕೆಗಳನ್ನು ಉತ್ಪತ್ತಿಗಾಗಿ ಹಿಂಡಿನಲ್ಲಿ ಸಾಕಿದಾಗ ಮೇಯಿಸುವುದಲ್ಲದೇ ದಾಣಿ ಮಿಶ್ರಣ ಮತ್ತು ಹಸಿರು ಮೇವನ್ನು ಪೂರೈಸಬೇಕಾಗುತ್ತದೆ. ಸಾಮಾನ್ಯವಾಗಿ ಒಂದು ಬಲಿತ ಮೇಕೆಗೆ 5 ಕೀಲೊ ಮೇವು ಹುಲ್ಲು ಮತ್ತು 0.2 ರಿಂದ 0.3 ಕೀಲೊ ದಾಣಿ ಮಿಶ್ರಣವನ್ನು ಪ್ರತಿನಿತ್ಯ ಕೊಡಬೇಕು.

## ದಾಣಿ ಮಿಶ್ರಣಕ್ಕೆ ಸೇರಿಸಬೇಕಾದ ಪದಾರ್ಥಗಳು

| | |
|---|---|
| ಹುಲ್ಲು | ನೇಪಿಯರ್ ಹುಲ್ಲು, ಪ್ಯಾರಾ ಹುಲ್ಲು, ಗಿನಿ ಹುಲ್ಲು |
| ಏಕದಳ ಬೆಳೆಗಳು | ಜೋಳ, ಗೋವಿನ ಜೋಳ, ಓಟ್ಸ್ |
| ದ್ವಿದಳ ಬೆಳೆಗಳು | ಕುದುರೆ ಮೆಂತೆ, ಅಲಸಂದೆ. |
| ಮೇವಿನ ಮರದ ಕಾಯಿಗಳು(ಒಣ ಮೇವು) | ಕರಿಜಾಲಿ, ತಂಗಡಿ, ಚೊಗಚೆ, ಬಾಗೆ, ತುಗ್ಗಲಿ, ಬಿಲ್ವಾರ, ಸಣ್ಣ ಬಸವನ ಪಾದ, |
| ಮರಗಳು | ಸುಬಾಬುಲ್, ನುಗ್ಗೆ, ಹಿಪ್ಪುನೇರಳೆ, ಆಲದ ಮರ, ಬೇವಿನ ಮರ |
| ಕೊಂಕಣ ಪ್ರದೇಶದಲ್ಲಿ ಹೆಚ್ಚಾಗಿ ಸಿಗುವ ಮರಗೆಣಸು, ಹಲಸಿನ ಎಲೆಗಳು, ಬಾಳೆ ಎಲೆ, ಅನಾನಸ್ ಎಲೆಗಳು, ಮುಳ್ಳುಗಳು, ಬಾಳೆ ಗಿಡದ ಕಾಂಡ, ಮತ್ತು ಗೆಡ್ಡೆ ಗೆಣಸುಗಳನ್ನು ಬಳಸಬಹುದು | |

ಕಟ್ಟಿಹಾಕುವ ಪದ್ಧತಿಯಲ್ಲಿ ಸಾಕುವುದಾದರೆ ಏಕದಳ ಮತ್ತು ದ್ವಿದಳ ಧಾನ್ಯ ಮೇವನ್ನು ಬೆಳೆದುಕೊಳ್ಳಬೇಕಾಗುತ್ತದೆ. ಒಂದು ಎಕರೆಗೆ ಸರಾಸರಿ 25 ಮೇಕೆಗಳನ್ನು ಈ ಪದ್ಧತಿಯಲ್ಲಿ ಸಾಕಬಹುದಾಗಿದೆ.

## ಮೇವಿನ ಬೆಳೆಗಳು /ಮರಗಳು

| | |
|---|---|
| ಹುಲ್ಲು | ನೇಪಿಯರ್ ಹುಲ್ಲು, ಪ್ಯಾರಾ ಹುಲ್ಲು, ಗಿನಿ ಹುಲ್ಲು |
| ಏಕದಳ ಬೆಳೆಗಳು | ಜೋಳ, ಗೋವಿನ ಜೋಳ, ಓಟ್ಸ್ |
| ದ್ವಿದಳ ಬೆಳೆಗಳು | ಕುದುರೆ ಮೆಂತೆ, ಅಲಸಂದೆ. |
| ಮೇವಿನ ಮರದ ಕಾಯಿಗಳು(ಒಣ ಮೇವು) | ಕರಿಜಾಲಿ, ತಂಗಡಿ, ಚೊಗಚೆ, ಬಾಗೆ, ತುಗ್ಗಲಿ, ಬಿಲ್ವಾರ, ಸಣ್ಣ ಬಸವನ ಪಾದ, |
| ಮರಗಳು | ಸುಬಾಬುಲ್, ನುಗ್ಗೆ, ಹಿಪ್ಪುನೇರಳೆ, ಆಲದ ಮರ, ಬೇವಿನ ಮರ |
| ಕೊಂಕಣ ಪ್ರದೇಶದಲ್ಲಿ ಹೆಚ್ಚಾಗಿ ಸಿಗುವ ಮರಗೆಣಸು, ಹಲಸಿನ ಎಲೆಗಳು, ಬಾಳೆ ಎಲೆ, ಅನಾನಸ್ ಎಲೆಗಳು, ಮುಳ್ಳುಗಳು, ಬಾಳೆ ಗಿಡದ ಕಾಂಡ, ಮತ್ತು ಗೆಡ್ಡೆ ಗೆಣಸುಗಳನ್ನು ಬಳಸಬಹುದು | |

## ಪ್ರಮುಖ ಆರೋಗ್ಯ ಸಮಸ್ಯೆಗಳು ಮತ್ತು ಮನೆಯಲ್ಲಿ ಪ್ರಥಮ ಚಿಕಿತ್ಸೆ.

ಮೇಕೆ ಸಾಕಣೆ ಮಾಡುವವರಲ್ಲಿ ಅನೇಕ ಸಮಸ್ಯೆಗಳು ನಮ್ಮ ರೈತರನ್ನು ಕಾಡುತ್ತಿದೆ. ಇವುಗಳಲ್ಲಿ ಒಂದು ಸಮಯಕ್ಕೆ ಸರಿಯಾಗಿ ರೋಗಗಳ ಚಿಕಿತ್ಸೆಯಾಗದೆ, ಅವುಗಳ ಮರಣ ಪ್ರಮಾಣ ಜಾಸ್ತಿಯಾಗುತ್ತಿರುವುದು. ಹಲವಾರು ಬಾರಿ ರೋಗದ ಲಕ್ಷಣ ಕಂಡು ಬಂದ ತಕ್ಷಣ ಪಶುವೈದ್ಯರಿಂದ ಚಿಕಿತ್ಸೆ ಮಾಡಿಸಲಾಗದೆ ನೂರಾರು ಮೇಕೆಗಳು ಮರಣ ಹೊಂದಿರುವ ಉದಾಹರಣೆಗಳಿವೆ. ಇಂತಹ ಸಂಧರ್ಭಗಳಲ್ಲಿ ಪಶುವೈದ್ಯರಿಂದ ಚಿಕಿತ್ಸೆ ಮಾಡಿಸುವವರೆಗೆ, ನಮ್ಮ ರೈತರು ತಮ್ಮಲ್ಲಿ ಲಭ್ಯವಿರುವ ಕೆಲವು ವಸ್ತುಗಳನ್ನು ಉಪಯೋಗಿಸಿಕೊಂಡು, ರೋಗವು ಹೆಚ್ಚು ಉಲ್ಬಣವಾಗದಂತೆ ತಡೆಯಬಹುದು. ಇದನ್ನು ಪ್ರಥಮ ಚಿಕಿತ್ಸೆ ಎಂದು ಕರೆಯುತ್ತೇವೆ. ಪ್ರಥಮ ಚಿಕಿತ್ಸೆಯು ಮುಖ್ಯ ಚಿಕಿತ್ಸೆಗೆ ಪೂರಕವಾಗಿರುವುದೇ ವಿನಃ ಇದನ್ನೆ ಮುಖ್ಯ ಚಿಕಿತ್ಸೆ ಎಂದು ಪರಿಗಣಿಸಬಾರದು.

## ಹೊಟ್ಟೆ ಉಬ್ಬುವುದು

ಮೇಕೆಗಳು ಒಮ್ಮೆಗೆ ಹೆಚ್ಚು ದವಸ ಧಾನ್ಯಗಳನ್ನು ಅಥವಾ ದ್ವಿದಳ ಧಾನ್ಯಗಳ ಹಸಿ ಮೇವನ್ನು ತಿಂದಾಗ ಹೊಟ್ಟೆ ಉಬ್ಬುವ ಸಂಭವವಿರುತ್ತದೆ. ಇಂತಹ ಸಂಧರ್ಭಗಳಲ್ಲಿ ಮೇಕೆಗಳಿಗೆ ಮೊದಲು 100 ರಿಂದ 150 ಮಿಲಿ ಅಡುಗೆ ಎಣ್ಣೆಯನ್ನು ಕುಡಿಸಬೇಕು. ಸ್ವಲ್ಪ ಇಂಗು ಮತ್ತು 50 ಗ್ರಾಂ ಅಡುಗೆ ಸೋಡಾವನ್ನು ಕೊಡಬಹುದು.

ಇದನ್ನು ತಡೆಗಟ್ಟಲು ಮೇಕೆಗಳು ಒಮ್ಮೆಗೆ ಹೆಚ್ಚು ದವಸ ಧಾನ್ಯಗಳನ್ನು ಅಥವಾ ದ್ವಿದಳ ಧಾನ್ಯಗಳ ಹಸಿ ಮೇವನ್ನು ತಿನ್ನದಂತೆ ಎಚ್ಚರಿಕೆ ವಹಿಸಬೇಕು. ಇವುಗಳನ್ನು ತಿನ್ನಿಸಬೇಕಾದಲ್ಲಿ ಕ್ರಮೇಣ ಹೆಚ್ಚು ಹೆಚ್ಚು ತಿನ್ನಿಸುತ್ತಾ ಹೋಗಬೇಕು.

ಕೆಲವೊಮ್ಮೆ ಮೊಳೆ, ತಂತಿ, ಪ್ಲಾಸ್ಟಿಕ್ ಮೊದಲಾದ ವಸ್ತುಗಳನ್ನು ತಿಂದಾಗಲೂ ಹೊಟ್ಟೆ ಉಬ್ಬುವುದುಂಟು. ಆದ್ದರಿಂದ ಇಂತಹ ಪದಾರ್ಥವನ್ನು ತಿನ್ನದಂತೆ ಎಚ್ಚರಿಕೆ ವಹಿಸಬೇಕು.

## ಅಜೀರ್ಣ

ಮೇಕೆಗಳು ಕೆಲವು ಸಾರಿ ಮೇವು ತಿನ್ನುವುದನ್ನು ಕಡಿಮೆ ಮಾಡಬಹುದು ಅಥವಾ ನಿಲ್ಲಿಸಬಹುದು. ಇಂಥಹ ಸಂಧರ್ಭದಲ್ಲಿ ಅವುಗಳಿಗೆ 5–10 ಗ್ರಾಂ ಅಜವಾನ್ ಮತ್ತು 25–30 ಗ್ರಾಂ ಇಂಗನ್ನು ಕೊಡಬಹುದು.

ಶುಂಠಿ, ಇರುಳ್ಳಿ ಮತ್ತು ಕಾಳುಮೆಣಸನ್ನು ಮಿಶ್ರಣ ಮಾಡಿ ಕೊಡಬಹುದು.

## ಕೆಚ್ಚಲು ಬಾವು

ಈ ರೋಗ ಬಂದ ಮೇಕೆಗಳಲ್ಲಿ ಕೆಚ್ಚಲು ಉದಿಕೊಳ್ಳುತ್ತದೆ. ಕೆಚ್ಚಲು ಬಿಸಿಯಾಗಿದ್ದರೆ ತಂಪು ನೀರು ಅಥವಾ ಮಂಜು ಗಡ್ಡೆಯನ್ನು ಹಚ್ಚಬೇಕು. ಕೆಚ್ಚಲು ತಂಪಾಗಿದ್ದರೆ ಬಿಸಿನೀರಿನ ಬಟ್ಟೆಯಿಂದ ಒರೆಸಬೇಕು. ರೋಗಗ್ರಸ್ಥ ಮೊಲೆಯಿಂದ ಸಂಪೂರ್ಣವಾಗಿ ಹಾಲನ್ನು ಹಿಂಡಿ ದೂರ ಚೆಲ್ಲಬೇಕು. ಪಶುವೈದ್ಯರನ್ನು ಕರೆಯಿಸಿ ಸಂಪೂರ್ಣ ಚಿಕಿತ್ಸೆ ನಿಡಬೇಕು.

## ವಿಷಬಾಧೆ

ಹಲವಾರು ಬಾರಿ ಮೇಕೆಗಳು ವಿಷ ಪದಾರ್ಥಗಳನ್ನು ಸೇವಿಸಬಹುದು ಇದು ಮೇವಿನ ರೂಪದಲ್ಲಿರಬಹುದು, ಬೆಳೆಗಳಿಗೆ ಸಿಂಪಡಿಸಿದ ಕೀಟನಾಶಕಗಳಿಂದಾಗಿರಬಹುದು, ವಿಷವಸ್ತುಗಳಿಂದ ಕಲುಶಿತವಾದ ನೀರಿನ ಸೇವನೆಯಿಂದಾಗಬಹುದು ಅಥವಾ ನೇರ ವಿಷಪಧಾರ್ಥಗಳಿಂದಾಗಬಹುದು. ಇಂತಹ ಸಂಧರ್ಭಗಳಲ್ಲಿ ಮೇಕೆಗಳಿಗೆ ಹೆಚ್ಚು ನೀರು ಕುಡಿಸಬೇಕು. ಚಹಾ ಡಿಕಾಕ್ಷನ್ ಅನ್ನು ಸುಮಾರು 50 ರಿಂದ 100 ಮಿಲಿ ಕುಡಿಸಬಹುದು. ಸುಮಾರು 20 ಗ್ರಾಂ ಹುಣಸೆ ಹಣ್ಣನ್ನು ನೀರಿನಲ್ಲಿ ರಸ ಮಾಡಿ ಕುಡಿಸಬೇಕು.

## ಗಾಯಗಳು

ಮೇಕೆಗಳಿಗೆ ಸಾಮಾನ್ಯ ಗಾಯಗಳಾದಲ್ಲಿ ಗಾಯವನ್ನು ಸ್ವಚ್ಛ ನೀರಿನಿಂದ ತೋಳೆಯಬೇಕು. ನಂತರ ಯಾವುದಾರದು ನಂಜುನಾಶಕ ಪುಡಿ ಅಥವಾ ದ್ರಾವಣವನ್ನು ಹಚ್ಚಬೇಕು. ಈ ದೃಷ್ಟಿಯಲ್ಲಿ ಅರಿಶಿಣವು ಬಹಳ ಪರಿಣಾಮಕಾರಿಯಾಗಿರುತ್ತದೆ. ಬೇವಿನ ಎಣ್ಣೆಯು ಕಿಟನಾಶಕ ಗುಣಹೊಂದಿರುವುದರ ಜೊತೆಗೆ ಅದು ನೊಣಗಳನ್ನು ಕೂಡ ದೂರ ಇಡಬಹುದು.
ನಾಯಿ ಕಚ್ಚಿದ ಗಾಯವಾದಲ್ಲಿ ರಕ್ತಸ್ರಾವವಿದ್ದರೆ ರಕ್ತ ಹೊರಗೆ ಹೊಗಲು ಬಿಡಬೇಕು, ನಂತರ ಗಾಯದ ಮೇಲ್ಭಾಗಕ್ಕೆ ಗಂಟು ಹಾಕಬೇಕು. ಗಾಯವನ್ನು ಡೆಟೊಲ್ ಅಥವಾ ಪೊವಿಡೊನ್ ಆಯೋಡಿನ್ ಅನ್ನು ಹಚ್ಚಬೇಕು. ನಂತರ ರೇಬಿಸ್‌ನ ಲಸಿಕೆ ಅಥವಾ ಮೇದಸ್ಸನ್ನು ಪಶುವೈದ್ಯರ ಸಲಹೆಯಂತೆ ಕೊಡಿಸಬೇಕು.

## ಕಾಲಿನ ಕೊಳೆತ

ಕೊಟ್ಟಿಗೆ ನೆಲದ ತೇವಾಂಶ ಹೆಚ್ಚಿದ್ದಾಗ ಮೇಕೆಯ ಗೊರಸು ಮತ್ತು ಬೆರಳುಗಳ ಸುತ್ತಲಿನ ಚರ್ಮ ಕೆಂಪು ಬಣ್ಣಕ್ಕೆ ತಿರುಗುತ್ತದೆ. ನಂತರ ಗೊರಸು ಕಿತ್ತು ಬರುತ್ತದೆ. ನಿರ್ವಾತ ಬ್ಯಾಕ್ಟೇರಿಯಗಳು ವೃದ್ದಿಗೊಂಡು ಸೊಂಕು ತಗುಲಿದ ಭಾಗದಿಂದ ಕೆಟ್ಟವಾಸನೆ ಉಂಟಾಗುತ್ತದೆ.

ಗಾಯವನ್ನು 10% ಮೈಲುತುತ್ತ ಅಥವಾ ಸತುವಿನ ಸಲ್ಫೇಟ್ ದ್ರಾವಣ ದಿಂದ ತೊಳೆಯಬೇಕು. ಅಂಕುಡೊಂಕಾಗಿ ಬೆಳೆದ ಗೊರಸಿನ ಭಾಗವನ್ನು ಕತ್ತರಿಸಿ ಶುಚಿಯಾಗಿಡಬೇಕು. ಕೊಟ್ಟಿಗೆ ನೆಲ ಒಣಗಿದ ರೀತಿಯಲ್ಲಿ ನೊಡಿಕೊಳ್ಳಬೇಕು.

## ಪ್ರಮುಖ ಸೊಂಕು ರೋಗಗಳು

### ಪಿ.ಪಿ.ಆರ್

ಅತಿಯಾದ ಜ್ವರ, ಕೀವು ರೀತಿಯ ದ್ರವ ಮೂಗಿನಿಂದ ಸೋರುವುದು, ಆನಂತರದ ದಿನದಲ್ಲಿ ಗಟ್ಟಿಯಾಗುವುದು, ಬಾಯಲ್ಲಿ ಹುಣ್ಣಾಗಿ ನೊರೆಯುಕ್ತ ಜೊಲ್ಲು ಸೋರುವಿಕೆ, ನಂತರ ಭೇದಿ, ಆಮಶಂಕೆ ಕಾಣಿಸಿ ನಿತ್ರಾಣಗೊಂಡು ಸಾಯುತ್ತವೆ.
ಚಿಕಿತ್ಸೆ: ಮೂರು ತಿಂಗಳು ಮೇಲ್ಪಟ್ಟ ಮರಿಗಳಿಗೆ ಲಸಿಕೆ ಹಾಕಿಸಬೇಕು ನಂತರ ಮೂರು ವರ್ಷಕ್ಕೊಮ್ಮೆ ಲಸಿಕೆ ಹಾಕಿಸಬೇಕು

## ಕಾಲು ಮತ್ತು ಬಾಯಿ ಬೇನೆ

ಬಾಯಿಗಳ ಒಳಗೆ ಹಾಗೂ ಕಾಲಿನ ಗೊರಸುಗಳ ಮಧ್ಯೆ ದ್ರವ ತುಂಬಿದ ಗುಳ್ಳೆಗಳು ಕಾಣಿಸಿಕೊಳ್ಳುತ್ತವೆ. ರೋಗಗ್ರಸ್ಥ ಆಡಿನ ಬಾಯಿ ಮತ್ತು ಕಾಲನ್ನು ಶೇಕಡ 4 ರ ಬಟ್ಟೆ ಸೋಡಾ ಅಥವಾ ಪೊಟ್ಯಾಷಿಯಂ ಪರಮಾಂಗನೇಟ್ ದ್ರಾವಣದಿಂದ ತೊಳೆಯಬೇಕು. ಬಾಯಿ ಮತ್ತು ನಾಲಗೆಯ ಗಾಯಕ್ಕೆ ಜೇನುತುಪ್ಪ , ಅರಿಸಿನ ಅಥವಾ ಗ್ಲಿಸರಿನ್ ಹಚ್ಚಬಹುದು. ಮೇಕೆಗಳಿಗೆ ಮೇವು ತಿನ್ನಲು ಕಷ್ಟವಾಗುವುದರಿಂದ ಮೆತ್ತನೆಯ ಮೇವು ಮತ್ತು ಹಿಂಡಿಗಳನ್ನು ಕೊಡಬೇಕು. ಪಶುವೈದ್ಯರಿಂದ ವರ್ಷಕ್ಕೆರಡು ಬಾರಿ ಲಸಿಕೆ ಹಾಕಬೇಕು.

## ಕರಳುಬೇನೆ

ಆರೋಗ್ಯವಂತ ಚನ್ನಾಗಿ ಮೇಯುತ್ತಿರುವ ಪ್ರಾಣಿಗಳು ಈ ರೋಗಗಕ್ಕೆ ಬೇಗ ತುತ್ತಾಗುತ್ತವೆ. ಅವಶ್ಯಕತೆಗಿಂತ ಹೆಚ್ಚಾಗಿ ಹಸಿರು ಮೇವು ತಿಂದಾಗ ಕರುಳಿನಲ್ಲಿ ವಿಷಾಣುಗಳು ಉತ್ಪತ್ತಿಯಾಗಿ ಸಾವನಪ್ಪುತ್ತವೆ.

**ಚಿಕಿತ್ಸೆ:** ಮಳೆಗಾಲಕ್ಕೆ ಮೊದಲು ತಿಂಗಳು ಮೆಲ್ಪಟ್ಟ ಮೇಕೆಗಳಿಗೆ ಲಸಿಕೆ ಹಾಕಿಸಬೆಕು

## ಪರಾವಲಂಬಿ ಜೀವಿಗಳು

ಒಳಪರಾವಲಂಬಿ ಜೀವಿಗಳಾದ ಜಂತುಹುಳಿ/ಲಾಡಿಹುಳು/ಚಪ್ಪಟೆ ಕಾರಲು ಹುಳುಗಳಿಂದ ಭೇದಿ, ರಕ್ತ ಹೀನತೆ, ಮೆದುಳಿನ ಉರಿಯುತ, ಕುರುಡುತನ, ಪಾರ್ಶ್ವ ವಾಯು ಚಿಹ್ನೆಗಳು ಕಾಣಬಹುದು, ಇವುಗಳನ್ನು ತಡೆಗಟ್ಟಲು ಮರಿಗಳು 15 ದಿನಗಳಾದಾಗ, ಒಂದು ತಿಂಗಳ ನಂತರ ಮತ್ತು ಮೂರು ತಿಂಗಳಿಗೊಮ್ಮೆ ಎರಡು ಬಾರಿ ಪಶುವೈದ್ಯರ ಸಲಹೆಯ ಮೆರೆಗೆ ಜಂತುನಾಶಕ ಔಷಧಿ ಕೊಡಿಸಬೇಕು. ಇದಾದನಂತರ ಆರು ತಿಂಗಳಿಗೊಮ್ಮೆ ಕೊಡಿಸುತ್ತಿರಬೇಕು. ಬಸವನ ಹುಳುಗಳನ್ನು ನಿಯಂತ್ರಿಸ ಬೇಕು.

ಹೊರ ಪರಾವಲಂಬಿ ಜೀವಿಗಳಾದ ಉಣ್ಣೆ, ನುಶಿ, ಹೇನು, ಚಿಗಟೆಗಳನ್ನು ತಡೆಯಲು ಸೂಕ್ತವಾದ ಔಷಧವನ್ನು ಮೈಮೇಲೆ ಸಿಂಪಡಿಸಲಾಗುತ್ತದೆ.

## ಸಿಡುಬು ರೋಗ (ಅಮ್ಮ)

ಕಣ್ಣಿನ ಸುತ್ತ, ಬಾಲದ ಬುಡ, ಕೆಚ್ಚಲು ತುಟಿಗಳ ಮೇಲೆ ಮತ್ತು ತೊಡೆಗಳ ಚರ್ಮದ ಮೇಲೆ ಬೊಕ್ಕೆಗಳು ಕಾಣಿಸಿಕೊಳ್ಳುತ್ತವೆ. ಈ ಬೊಕ್ಕೆಗಳು ನಂತರ ಇತರೆ ಸೋಂಕಿನಿಂದ ಹುಣ್ಣಾಗಿ ಮಾರ್ಪಾಡಾಗುತ್ತವೆ. ಕೆಮ್ಮು, ಜೊಲ್ಲು ಸೋರುವಿಕೆ, ಜ್ವರ ಹಾಗೂ ಗರ್ಭಸ್ಥ ಮೇಕೆಗಳು ಕಂದು ಹಾಕಬಹುದು.

**ಚಿಕಿತ್ಸೆ :** ಬೇಸಿಗೆ ಕಾಲಕ್ಕೆ ಮೊದಲು ಲಸಿಕೆ ಹಾಕಿಸಬೇಕು